*ಪ್ರಾರಂಭಿಸಿದ ವೇಳೆಃ ಮಧ್ಯಾಹ್ನ 12-17 ಗಂಟೆ*



**ಸಾಕ್ಷಿಯನ್ನು ದಿನಾಂಕ 29-11-2019ರಂದು ನ್ಯಾಯಾಲಯಕ್ಕೆ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆ – ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ಎಸ್.ವಿ. ರವರಿಂದ ಃ-</u>**

**ತಹಶೀಲ್ದಾರ್‌ರವರ ಆದೇಶದ ದೃಢೀಕೃತ ನಕಲನ್ನು ನಿಡಿ-1 ಎಂದು ಗುರುತಿಸಲಾಯಿತು. ಎಂ.ಆರ್. 05/1987-88ರ ದೃಢೀಕೃತ ನಕಲನ್ನು ನಿಡಿ-2 ಎಂದು ಗುರುತಿಸಲಾಯಿತು. ದಾವಾಆಸ್ತಿ ಮತ್ತು ಇತರೇ ಆಸ್ತಿಗಳ ಆರ್‌ಟಿಸಿಗಳ ದೃಢೀಕೃತ ನಕಲುಗಳನ್ನು ಕ್ರಮವಾಗಿ ನಿಡಿ-3 ರಿಂದ ನಿಡಿ-20 ಎಂದು ಗುರುತಿಸಲಾಯಿತು. ದಾವಾಆಸ್ತಿಯ ಪಟ್ಟಾಪುಸ್ತಕದ ದೃಢೀಕೃತ ನಕಲನ್ನು ನಿಡಿ-21 ಎಂದು ಗುರುತಿಸಲಾಯಿತು. ನಮ್ಮ ಮನೆತನದ ವಂಶವೃಕ್ಷದ ದೃಢೀಕೃತ ನಕಲುಗಳನ್ನು ನಿಡಿ-22 ಮತ್ತು ನಿಡಿ-23 ಎಂದು ಗುರುತಿಸಲಾಯಿತು. ದಿನಾಂಕ 24-04-1973ರಂದು ಆದ ಕ್ರಯದ ಕರಾರುಪತ್ರದ ದೃಢೀಕೃತ ನಕಲನ್ನು ನಿಡಿ-24 ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗಳ ಮೂಲಪ್ರತಿಗಳು ಅಸಲು ದಾವೆ ಸಂ. 524/2011ರಲ್ಲಿ ಹಾಜರುಪಡಿಸಿದ್ದಾಗಿ ಸಾಕ್ಷಿ ನುಡಿಯುತ್ತಾರೆ.**

**<u>ಪಾಟೀ ಸವಾಲು</u> - ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

*ಮುಕ್ತಾಯದ ವೇಳೆಃ ಮಧ್ಯಾಹ್ನ 12-23 ಗಂಟೆ*

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

**ಓದಿ ಹೇಳಿ ಕೇಳಿ ಸರಿ ಇದೆ,**

**(ರೂಪ. ಎಂ.ಡಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ**
**ಜೆ.ಎಂ.ಎಫ್.ಸಿ. ಕೆ.ಜಿ.ಎಫ್**